
ನೇಯುವುದಕ್ಕೆ ಬಿಡದೇ ಅವಳಿಂದ ಹೇಳಿಸಿಕೊಂಡು ತಾವೇ ಹಸೆ ನೇಯ್ದರು. ಆದರೆ ಚಣ್ಣುಗೆ ಸಮಾಧಾನ ಆಗದೆ ಮಗುವಿಗಾಗಿ ತಾನೊಂದು ನೇಯ್ತೇನೆ ಅಂತ ಹಟ ಮಾಡಿ ಸಣ್ಣದೊಂದು ಹಸೆ ನೇಯ್ದಳು. ಮುಂಡಕನ ಓಲೆಯ ಹಸೆಗಳು ಆ ಬಿಡಾರಗಳಿಗೆ ಶ್ರೀಮಂತಿಕೆಯ ಕಳೆ ತಂದುಬಿಟ್ಟವು. ಬ್ಯಾಸ್ಗಿಗೆ ನೆಲದ ಮೇಲೆ, ಚಳಿ ಮಳೆಗೆ ಆ ಹಸೆಯ ರೌಂಡು ಮಾಡಿ ಹಸೆಗುಳಿ ಒಳಗೆ ಮಲಗಿ ಬೇಡು ಬೆಳೆದಿದ್ದ. ಹಸೆಗುಳಿ ಒಳಕ್ಕೆ ಹೊಕ್ಕಂಬುದಕ್ಕಿಂತಲೂ ಅಬ್ಬಿಯ ಸೆರಗೊಳಗೆ ಹೊಕ್ಕಂಬುದು ಬೇಡುಗೆ ಇಷ್ಟ.

* * *

ಅಬ್ಬಿಯ ಸೆರಗೊಳ್ಗೆ ಆಸಾಡಿ ಹಬ್ಬದ ಬೆಳಗಾದರೂ ಬೇಡು ಮಾತ್ರ ಏಳಲಿಲ್ಲ. ಕಣ್ ಚಾ ಮಾಡಿ ಅಕ್ಕಿ ಕಾಳು ಹೊರ್ದು ಚಣ್ಣು ಮಗನ ಬೆಳಗನ್ನು ಸ್ವಾಗತಿಸಿದಳು. ಅಬ್ಬಿಯ ಸೆರಗಿಂದ ಜಾರಿದ ಬೇಡು ಹಸೆಗುಳಿಯ ಒಳಗೆ ಜಾಗ್ಟಿಯ ಹಾಗೆ ಸುರುಳಿ ಸುರುಳಿ ಸುತ್ಕೊಂಡು ಮನಿಕಂಡಿದ್ದ. ಬಡವರ ಮೇಲೆ ಸೇಡು ತೀರಿಸಿಕೊಳ್ಳುವ ಹಾಗೆ ಆಸಾಡಿ ಮಳೆ ಬಾರಿಸುತ್ತಿತ್ತು. ಮೂರು ಬಿಡಾರಕ್ಕೂ ಕೊಂಗಾಟದ ಮಗುವಾದ ಬೇಡುವಿನ ಆಟಗಳು ಆ ಹಿರಿಯರ ಹೊಟ್ಟೆ ತುಂಬಿಸುತ್ತಿತ್ತು. ದೇವರು ದಿಂಡರು ಹಾಗಿರಲಿ ಅವರಂತೇ ಇರುವ ಮನುಷ್ಯರು ತಮ್ಮಿಂದ ದೂರ ಇರುವಾಗ ಹತ್ತಿರವೇ ಇದ್ದು ಅವರನ್ನು ಬದುಕಿಸಿದ್ದು ಮಾತ್ರ ಹಸಿವು. ಒಂದು ತುತ್ತು ಅನ್ನಕ್ಕಾಗಿ ಹೇಲು ಬಾಚುವ ಕೆಲಸ ಮಾಡುವುದೂ ಹೇಸಿಗೆ ಅಂತ ಅನಿಸದು. ಆದರೆ ತಮ್ಮನ್ನು ಹೇಲಿಗಿಂತಲೂ ಹೇಸಿಗೆಯಾಗಿ ಕಾಣುವ ಜನರ ಬಗ್ಗೆ ಈ ಮೂರು ಬಿಡಾರಗಳು ಥೂ ಥೂ ಅಂತ ಉಗಿದಿದ್ದವು. ಎಂತ ಮಾಡುವುದು ಆ ಜನರ ಎಸೆಯುವ ತಂಗಳು ಈ ಬಿಡಾರಗಳನ್ನು ಜೀವಂತ ಇರಿಸಿದ್ದಿದೆ. ಎಂಥೆಂಥಾ ಸಿಟ್ಟಿನ ಕಡಲನ್ನು ಒಡಲು ಜೀರ್ಣ ಮಾಡಿಕೊಂಡಿಲ್ಲ!

ಆಸಾಡಿ ಭೂತಗಳಿಗೆ ಎಡೆ ಇಡುವ ಸಲುವಾಗಿ ಕರಾವಳಿಯಲ್ಲಿ ಆಸಾಡಿ ಹಬ್ಬ ಮಾಡುತ್ತಾರೆ. ಮನೆ ದೇವರಿಗಿಂತಲೂ ತೀರಿಹೋದ ಮನೆಯ ಹಿರೀಕರಿಗೆ ವರ್ಷಕ್ಕೆ ಒಂದು ಸಲ ಆಸಾಡಿ ಜಡಿಯ ಕಾಲದಲ್ಲಿ ಎಡ ಇಡುತ್ತಾರೆ. ಹಾಂಗೆ ಮನೆಯ ಹೊರಗಿರುವ ಕೀಳು ಎಂಬ ದೈವಕ್ಕೂ ಎಡೆ ಇಡುತ್ತಾರೆ. ಕೆಲವರು ಈಸೂರನ



ಪೈಕಿಯವರು ಬೇಡುವುದಕ್ಕೆ ಬಂದರೆ ಕೀಳಿನ ಎಡೆ ಊಟ ಕೊಡುವುದೂ ಉಂಟು. ಕಳ್ಳು, ಸಾರಾಯಿ, ಬೀಡಿಯನ್ನೂ ಕೀಳಿನ ಎಡೆಗೆ ಇಡುತ್ತಾರೆ. ಅಂತಾ ಎಡೆ ಈಸೂರನ ಬಿಡಾರದವರಿಗೆ ಸಿಕ್ಕಿದ್ದೂ ಇದೆ. ಈಸೂರನ ಪೈಕಿಯವರು ಬೇಡುವುದಕ್ಕೆ ಬಂದಾಗ ಆ ಎಡೆ ಊಟಕ್ಕೆ ಕೈ ಉಗುರು ಹಾಕಿ ಕೊಡುವವರೂ ಇದ್ದಾರೆ. ಉಗುರೋ... ಬೆಗರೋ...! ತಮ್ಮ ಬಿಡಾರದಲ್ಲಿ ಎಂದೂ ಮಾಡಲಾಗದ ಅಂತ ರುಚಿಯಾದ ಊಟದ ಮುಂದೆ ಒಂದು ಕೈ ಉಗುರು ಹಸಿವಿನ ಕಡಲನ್ನು ಮುಳುಗಿಸಲಿಕ್ಕೆ ಆಗುತ್ತಾ? ಅಂತಾ ಎಷ್ಟು ಉಗುರುಗಳು ಊಟದೊಳಗಿದ್ದರೂ ಒಡಲನ್ನು ಸೀಳಿದ ಉದಾಹರಣೆ ಆ ಬಿಡಾರಗಳಲ್ಲಿ ನಡೆದಿಲ್ಲ. ಇಡ್ಲಿ, ಕಡುಬಿನ ತುಂಡು ಕೋಳಿ ಹೋಳು ಆ ಗಸಿ ಪರಿಮಳಕ್ಕೆ ಆ ಬಿಡಾರಕ್ಕೆ ಬಿಡಾರವೆ ರಾವಿನ ಹಂಗೆ ಹಸಿದುಕೊಂಡು ಗಡಿಬಿಡಿ ಮಾಡುತ್ತದೆ. ಇನ್ನು ಚಿಕ್ಕ ಈ ಬೇಡು?

ಮೂರು ಗೊರ್ಬಿಗಳು ಊರ ಬದಿಯತ್ತ ಹೊರಟವು. ಚಣ್ಣುವಿನ ಗೊರ್ಬಿನ ಒಳಗೆ ಬೇಡು